# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಜಿ.ಹೆಚ್. ತಾರಾಮಣಿ, ಉಪ ಕೃಷಿ ನಿರ್ದೇಶಕರು, ಕೇಂದ್ರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:** 1). ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಕೃಇ 25 ಕೃಪರಿ 2011, ದಿನಾಂಕ:04-12-2014.

2). ಶ್ರೀಮತಿ ತಾರಾಮಣಿ, ಉಪ ಕೃಷಿ ನಿರ್ದೇಶಕರು ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ:15-10-2014 ಮತ್ತು 30-12-2014.

*********

**ಪ್ರಸ್ತಾವನೆ:**

ಶ್ರೀಮತಿ ಜಿ.ಹೆಚ್. ತಾರಾಮಣಿ, ಉಪ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ಹಲವಾರು ನೆನಪೋಲೆಗಳನ್ನು ಜಾರಿ ಮಾಡಿದಾಗ್ಯೂ ಸಹ 2008-09 ನೇ ಸಾಲಿನಿಂದ 2013-14 ನೇ ಸಾಲಿನವರೆಗಿನ ಆಸ್ತಿ/ಹೊಣೆಗಾರಿಕೆ ಪಟ್ಟಿಗಳನ್ನು ಸಲ್ಲಿಸದೇ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) ಮತ್ತು 23(1) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದರಿಂದ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಉದ್ದೇಶಿಸಿ, ಕರ್ನಾಟಕ ನಾಗರಿಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 12 (1)(ಎ) ರನ್ವಯ ಮೇಲೆ (1)ರಲ್ಲಿ ಓದಲಾದ ದಿನಾಂಕ:4-12-2014 ರಂದು ಕಾರಣ ಕೇಳುವ ನೋಟೀಸಿನೊಂದಿಗೆ ~~ಪತ್ರದೊಂದಿ~~ಗೆ ದೋಷರೋಪಣ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

2. ನೋಟೀಸಿಗೆ ಅಧಿಕಾರಿಯವರು ಮೇಲೆ (2) ರಲ್ಲಿ ಓದಲಾದ ಪ್ರತಿರಕ್ಷಣಾ ಹೇಳಿಕೆಯಲ್ಲಿ, 2008-09 ನೇ ಸಾಲಿನಿಂದ 2013-14 ನೇ ಸಾಲಿನವರೆಗಿನ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ ಹಾಗೂ ತಾವು ಈ ಹಿಂದೆ ಸಹಾಯಕ ಕೃಷಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ಕೃಷಿ ಆಯುಕ್ತರಿಗೆ ಸಲ್ಲಿಸಿದ್ದ ಹಿಂದಿನ ಸಾಲುಗಳ ಆಸ್ತಿ ವಿವರಗಳ ಪಟ್ಟಿಗಳು ಮನೆ ಬದಲಾವಣೆ ಸಂದರ್ಭದಲ್ಲಿ ಕಳೆದುಹೋಗಿದ್ದು, ಸದರಿ ಪಟ್ಟಿಗಳ ವಿವರಗಳನ್ನು ಆಧರಿಸಿ, ನಂತರದ ವರ್ಷಗಳ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯ ವಿವರಗಳನ್ನು ಸಿದ್ಧಪಡಿಸಬೇಕಾದ್ದರಿಂದ, ಕೃಷಿ ಆಯುಕ್ತರ ಕಛೇರಿಯಿಂದ ನನ್ನ ಹಿಂದಿನ ಆಸ್ತಿ/ಹೊಣೆಗಾರಿಕೆ ಪಟ್ಟಿಗಳನ್ನು ಸತತ ಪ್ರಯತ್ನದ ನಂತರ ಪಡೆದು, ಸಿದ್ಧಪಡಿಸಿರುವುದಾಗಿ ಮತ್ತು ತಮ್ಮ ಸಣ್ಣ ಎರಡು ಹೆಣ್ಣು ಮಕ್ಕಳ ನಿರ್ವಹಣೆ, ಕೌಟುಂಬಿಕ ತೊಂದರೆ, ಕಛೇರಿ ಕಾರ್ಯ ಒತ್ತಡಗಳಿಂದಾಗಿ ನನ್ನ ಕೈಮೀರಿದ ಸನ್ನೀವೇಶಗಳ ಪರಿಣಾಮದಿಂದ ಸಕಾಲದಲ್ಲಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಲ್ಲಿಸಲು ವಿಳಂಬವಾಗಿರುವುದಾಗಿ, ಇನ್ನು ಮುಂದೆ, ಇಂತಹ ಪ್ರಸಂಗಗಳು ಮರುಕಳಿಸದಂತೆ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಕಾಲದಲ್ಲಿ ಸರ್ಕಾರಕ್ಕೆ ಸಲ್ಲಿಸಲು ಬದ್ಧರಾಗಿರುವುದಾಗಿ ತಿಳಿಸುತ್ತಾ, ತಮ್ಮ ವಿವರಣೆಯನ್ನು ಅಂಗೀಕರಿಸಿ ತಮ್ಮನ್ನು ಸದರಿ ಆರೋಪದಿಂದ ಮುಕ್ತಗೊಳಿಸುವಂತೆ ಪ್ರಾರ್ಥಿಸಿರುತ್ತಾರೆ.

3. ಸದರಿ ಅಧಿಕಾರಿಯವರ ಪ್ರತಿರಕ್ಷಣಾ ಹೇಳಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ ಮತ್ತು ಅವರ ಸಮಾಜಾಯಿಷಿಯನ್ನು ಹಾಗೂ ಅವರ undertaking ಅನ್ನು ಪರಿಗಣಿಸಿ, ಇನ್ನು ಮುಂದೆ ಈ ರೀತಿಯ ವರ್ತನೆ ಮರುಕಳಿಸದಂತೆ ಹಾಗೂ ಸಕಾಲದಲ್ಲಿ/ನಿಗದಿತ ಸಮಯದೊಳಗೆ ಆಸ್ತಿ/ಹೊಣೆಗಾರಿಕೆ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದೆಂದು ಎಚ್ಚರಿಕೆ ನೀಡಲು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 25 ಕೃಪರಿ 2011**
**ಬೆಂಗಳೂರು, ದಿನಾಂಕ:19-02-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀಮತಿ ಜಿ.ಹೆಚ್.ತಾರಾಮಣಿ, ಉಪ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ಇನ್ನು ಮುಂದೆ ಇಂತಹ ಪ್ರಸಂಗಗಳು ಮರುಕಳಿಸಲು ಅವಕಾಶ ನೀಡದಂತೆ ಸಕಾಲದಲ್ಲಿ ಅವರ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಲ್ಲಿಸುವಂತೆ ಎಚ್ಚರಿಕೆ ನೀಡಿ ನೋಟೀಸು ಸಂಖ್ಯೆ: ಕೃಇ 25 ಕೃಪರಿ 2011 ದಿನಾಂಕ:4-12-2014 ರೊಂದಿಗೆ ಕೈಗೊಳ್ಳಲಾಗಿದ್ದ ಶಿಸ್ತು ಕ್ರಮವನ್ನು ಕೈ ಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)

**ಇವರಿಗೆ:-**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಶ್ರೀಮತಿ ಜಿ.ಹೆಚ್.ತಾರಾಮಣಿ, ಉಪ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ/ಅಂತರ್ಜಾಲ ತಾಣಕ್ಕೆ.